# ಚೈತನ್ಯದ ಬೆಂಬತ್ತಿ

## ಅನುಭವ

**ಅನುಭವ ಎಂದರೇನು?**

ಅನುಭವವು ಜ್ಞಾನದ ಆಗರ. ಜ್ಞಾನವು ಉಂಟಾಗುವುದು ಇಂದ್ರಿಯಗಳು ಬಾಹ್ಯಪ್ರಪಂಚವನ್ನು ಗ್ರಹಿಸುವುದರಿಂದ. ಹೀಗಾಗಿ ಪ್ರಪಂಚವನ್ನು ಇಂದ್ರಿಯಗಳು ಗ್ರಹಿಸುವ ಕ್ರಿಯೆಯನ್ನು ಅನುಭವ ಎಂದು ಕರೆಯಬಹುದು. ಆದರೆ ಅನುಭವದ ಪರಿಧಿಯನ್ನು ಇಷ್ಟಕ್ಕೆ ಮಾತ್ರ ಸೀಮಿತಗೊಳಿಸಲು ಸಾಧ್ಯವಿಲ್ಲ. ಅದು ಸ್ಮರಣೆ, ಕಲ್ಪನೆ, ಚಿಂತನೆ, ಭಾವನೆ, ಆಸೆ – ಇವೆಲ್ಲವನ್ನೂ ಒಳಗೊಳ್ಳುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ, ಮಾನಸಿಕ ಮತ್ತು ಭೌತಿಕ ಆಯಾಮಗಳಲ್ಲಿ ನಮ್ಮ ಪ್ರಜ್ಞೆಯು ಒಳಗೊಳ್ಳುವ ಎಲ್ಲವನ್ನೂ 'ಅನುಭವ' ಎಂದು ಹೆಸರಿಸಬಹುದು. ಆದ್ದರಿಂದ ಅನುಭವವು ಪ್ರಜ್ಞೆಯ ಪ್ರವಾಹವಲ್ಲದೆ ಬೇರೆಯಲ್ಲ ಎನ್ನುವುದು ನಮಗೆ ತಿಳಿಯುತ್ತದೆ. ಅನುಭವದಲ್ಲಿ ಎರಡು ವಿಧ: **ವ್ಯಕ್ತಿನಿಷ್ಠ** ಮತ್ತು **ವಸ್ತುನಿಷ್ಠ**. ಅದಲ್ಲದೆ, ಅನುಭೂತಿ, ಸೌಂದರ್ಯಾನುಭವ, ಧಾರ್ಮಿಕ ಅನುಭವ ಮತ್ತು ಪ್ರಜ್ಞಾತೀತ ಅನುಭವಗಳೆಂಬ ವಿವಿಧ ಭಾಗಗಳನ್ನೂ ನಾವು ಮಾಡಬಹುದು.

> **ಜ್ಞಾನವನ್ನು ಗಳಿಸುವ ಶಕ್ತಿಯು ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಬೇರೆ ಬೇರೆಯಾಗಿರುವುದನ್ನು ನೋಡುತ್ತೇವೆ. ಇದರಿಂದ ಪ್ರತಿಯೊಬ್ಬನೂ ತನ್ನದೇ ಆದ ಜ್ಞಾನಭಂಡಾರವನ್ನು ಹೊಂದಿರುವನೆಂದು ತಿಳಿದುಬರುತ್ತದೆ. ಜ್ಞಾನವನ್ನು ಕೇವಲ ಒಂದೇ ಒಂದು ಮಾರ್ಗದ ಮೂಲಕ ಪಡೆಯಬಹುದು, ಅದೆಂದರೆ ಅನುಭವ. ಇದನ್ನು ಬಿಟ್ಟು ಜ್ಞಾನಗಳಿಕೆಗೆ ಬೇರಾವ ಮಾರ್ಗವೂ ಇಲ್ಲ. – *ಸ್ವಾಮಿ ವಿವೇಕಾನಂದ***

ಅನುಭವವು ಉಗಮವಾಗುವ ಬಗೆಯನ್ನು ಅರಿಸ್ಟಾಟಲ್ ಹೀಗೆ ವಿವರಿಸುತ್ತಾನೆ: ಇಂದ್ರಿಯಗ್ರಾಹ್ಯತೆಯಿಂದ ನೆನಪು ಉಂಟಾಗುತ್ತದೆ. ಒಂದೇ ರೀತಿಯ ನೆನಪುಗಳು ಒಗ್ಗೂಡಿ ಅನುಭವವು ಮೂಡುತ್ತದೆ. ಕಲೆ ಮತ್ತು ವಿಜ್ಞಾನಗಳು, ಅನುಭವದಿಂದ ಪಡೆದ ಪರಿಣತಿಯ ಆಧಾರದ ಮೇಲೆ ಬೆಳೆಯುತ್ತವೆ. ನೈತಿಕ ಮತ್ತು ರಾಜಕೀಯ ಸಮಸ್ಯೆಗಳ ವಿಷಯದಲ್ಲಿ, ಅನುಭವವು ಮಾತ್ರವೇ ನ್ಯಾಯಯುತವಾದ ನಿರ್ಣಯಕ್ಕೆ ಆಧಾರವಾಗುತ್ತದೆ. ಹೀಗೆ ಜೀವನದ ಹತ್ತು ಹಲವು ರಂಗಗಳಲ್ಲಿ ಅನುಭವದ ಪ್ರಾಮುಖ್ಯತೆಯನ್ನು ಅರಿಸ್ಟಾಟಲ್ ಎತ್ತಿ ಹಿಡಿಯುತ್ತಾನೆ.

ಹಾಬ್ಸ್ ಮತ್ತು ವಿಲಿಯಮ್ ಜೇಮ್ಸ್ ಎಂಬ ಚಿಂತಕರು 'ಅನುಭವ' ಎಂಬ ಶಬ್ದವನ್ನು ಒಂದು ವಿಷಯದಲ್ಲಿ ಪಡೆದುಕೊಳ್ಳುವ ಪರಿಣತಿಗೆ ಅಥವಾ ರಾಜಕೀಯ ವ್ಯವಹಾರಗಳಲ್ಲಿ ತೆಗೆದುಕೊಳ್ಳುವ ಸರಿಯಾದ ನಿರ್ಧಾರಕ್ಕೆ ಪೂರಕವಾಗಿ ವಿವರಿಸುತ್ತಾರೆ. ಹಾಬ್ಸ್, 'ಅಧಿಕವಾದ ನೆನಪು ಅಥವಾ ಅನೇಕ ಸಂಗತಿಗಳ ನೆನಪೇ ಅನುಭವ' ಎಂದು ಬಣ್ಣಿಸುತ್ತಾನೆ. ಜೇಮ್ಸ್‌ನ ಪ್ರಕಾರ, ಅನುಭವವು ಚೈತನ್ಯದ ಪ್ರವಾಹವಲ್ಲದೆ ಬೇರೆಯಲ್ಲ. ಈ ಬಗ್ಗೆ ಅವನು ಹೀಗೆ ಬರೆಯುತ್ತಾನೆ: "ಅನುಭವವು ನಮ್ಮನ್ನು ಪ್ರತಿಗಂಟೆಯೂ ರೂಪಿಸುತ್ತಿರುತ್ತದೆ. ಅದಲ್ಲದೆ ನಮ್ಮ ಮನಸ್ಸನ್ನು ಜಗತ್ತಿನ ವಸ್ತುಗಳ ನಡುವೆ ಇರುವ ಕಾಲ–ದೇಶಗಳ ಸಂಬಂಧಗಳ ಕನ್ನಡಿಯನ್ನಾಗಿಸುತ್ತದೆ." ಕೇವಲ ಇಂದ್ರಿಯಗ್ರಾಹ್ಯತೆ ಮತ್ತು ಭಾವನೆಗಳಿಗೆ ಸಂಬಂಧಿಸಿದ್ದು ಮಾತ್ರ ಅನುಭವವಾಗಬಲ್ಲದು ಎಂದು ಜೇಮ್ಸ್ ಹೇಳುತ್ತಾನೆ. ಅವನ ಪ್ರಕಾರ ಅನುಭವದ ಮುಂಬಾಗಿಲೆಂದರೆ, ಪಂಚೇಂದ್ರಿಯಗಳ ದ್ವಾರ ಮಾತ್ರ. ಅದಲ್ಲದೆ ಅವನು ಅನುಭವಕ್ಕಿಂತ ಬೇರೆ ಸತ್ಯತತ್ತ್ವವೇ ಇಲ್ಲ ಎಂದು ವಾದಿಸುತ್ತಾನೆ. ನಮಗೆ ಕಂಡು ಬರುವ ವೈವಿಧ್ಯಗಳೆಲ್ಲವೂ ಅನುಭವದ ಪರಿಧಿಯಲ್ಲಿಯೇ ಬರುವಂಥವು. ಆದರೆ ಅನುಭವ ಎನ್ನುವುದು ಅವೆಲ್ಲವನ್ನೂ ಒಳಗೊಂಡೂ ತಟಸ್ಥವಾಗಿರುವ ಅಂಶ ಎಂದು ಅವನು ಅಭಿಪ್ರಾಯಪಡುತ್ತಾನೆ.

ಹ್ಯೂಮ್, ಅನುಭವವೆಂಬುದು ಒಂದು ವಾಸ್ತವಿಕ ಅಂಶವಾಗಿದ್ದು, ಪ್ರಕೃತಿಯ ನಿಯಮವು ನಮ್ಮ ಅನುಭವಕ್ಕೆ ಬರುವ ಘಟನೆಗಳ ಸರಣಿ ಮಾತ್ರವೇ ಹೊರತು, ಅದಕ್ಕಿಂತ ಭಿನ್ನವಾದ ಆದರ್ಶ ಕಲ್ಪನೆ ಅಲ್ಲ ಎಂದು ಹೇಳುತ್ತಾನೆ. ಕ್ಯಾಂಟ್ ಇನ್ನೂ ಮುಂದೆ ಹೋಗಿ, ಅನುಭವವೆಂಬುದು ವ್ಯಕ್ತಿನಿಷ್ಠವಲ್ಲ, ಬದಲಾಗಿ ವಸ್ತುನಿಷ್ಠ ಎಂದು ವಾದಿಸುತ್ತಾನೆ. ಅಂದರೆ, ನಮಗೆ ಸಾಧ್ಯ ವಾಗುವ ಎಲ್ಲ ಅನುಭವದ ತಾಣ ಪ್ರಕೃತಿ ಮಾತ್ರ. ವ್ಯಕ್ತಿನಿಷ್ಠವಾದುದು ಅನುಭವ ಎನ್ನಿಸಿಕೊಳ್ಳಲಾಗದು. ಯಾವುದೇ ಕ್ರಿಯೆ ಬಾಹ್ಯಪ್ರಕೃತಿಯೊಡನೆ ಸಂಬಂಧಿಸಿದ್ದರೆ ಮಾತ್ರವೇ ಅದು ಅನುಭವ ಎಂದು ಕರೆಸಿ ಕೊಳ್ಳಬಲ್ಲುದು. ಇದು ಕ್ಯಾಂಟ್ ಮುಂದಿಡುವ ವಾದ.

ಜಾನ್ ಡ್ಯೂಯಿ ಅಮೆರಿಕದ ತತ್ತ್ವಶಾಸ್ತ್ರಜ್ಞರಲ್ಲಿ ಪ್ರಮುಖನಾದವನು. ಅವನದು ದೈನಂದಿನ ಅನುಭವಕ್ಕೆ ಸಂಬಂಧಿಸಿದ ಮತ್ತು ಅದಕ್ಕಾಗಿಯೇ ಮುಡಿಪಾಗಿರುವ ಸಿದ್ಧಾಂತ. ಅವನ ಪ್ರಕಾರ ಅನುಭವವು ವ್ಯಕ್ತಿಯೊಬ್ಬನು ತನ್ನ ಸಾಮಾಜಿಕ ಮತ್ತು ಭೌತಿಕ ವಾತಾವರಣದ ಜೊತೆಗೆ ಒಡನಾಡುವ ಸಮಗ್ರ ಕ್ರಿಯೆಯನ್ನು ಒಳಗೊಂಡಿದೆ. ಇದರಿಂದಾಚೆಗೆ ಅನುಭವದ ಪರಿಕಲ್ಪನೆಯನ್ನು ವಿಸ್ತರಿಸಲು ಡ್ಯೂಯಿ ನಿರಾಕರಿಸುತ್ತಾನೆ ಹಾಗೂ ಇದಕ್ಕೂ ಮೀರಿ ಯಾರಾದರೂ ಏರಿಹೋಗಬಲ್ಲ ಸಾಧ್ಯತೆಯನ್ನೂ ತಳ್ಳಿಹಾಕುತ್ತಾನೆ. ಆತನ ಪ್ರಕಾರ, "ಅನುಭವವು ಪ್ರಕೃತಿಯಿಂದ ನಮ್ಮನ್ನು ಮರೆಮಾಚುವ ಪರದೆಯಲ್ಲ, ಅದು ಪ್ರಕೃತಿಯ ರಹಸ್ಯಗಳನ್ನು ಮತ್ತೂ ಆಳವಾಗಿ ಬಗೆದು ನೋಡುವ ಏಕಮೇವ ಸಾಧನ."

## ಸ್ವಪ್ರಜ್ಞೆ ಮತ್ತು ಅನುಭವ

ನಾವು ಈಗಾಗಲೇ ನೋಡಿದ ಹಾಗೆ, ಅನುಭವವೆಂದರೆ, ಪ್ರಜ್ಞೆಯ ಪ್ರವಾಹ. ಹಲವಾರು ಚಿಂತಕರ ಪ್ರಕಾರ ಪ್ರತಿಯೊಂದು ಅನುಭವದ ಹಿಂದೆ ಸ್ವಪ್ರಜ್ಞೆ ಇದ್ದೇ ಇರುತ್ತದೆ. ಅದು ಆ ಅನುಭವದ ಸಮಯದಲ್ಲಿ ಉದ್ಭವವಾಗುವುದಲ್ಲ, ಅದಕ್ಕೆ ಬದಲಾಗಿ, ಎಲ್ಲ ಅನುಭವವೂ 'ನಾನು' ಮತ್ತು 'ನನ್ನದು' ಎಂಬ ಪ್ರಜ್ಞೆಯನ್ನು ಹಿನ್ನೆಲೆಯಾಗಿಟ್ಟುಕೊಂಡೇ ಆರಂಭಗೊಳ್ಳುತ್ತದೆ. ಹೀಗಾಗಿ, ಪ್ರಜ್ಞಾರಹಿತವಾದ ಅನುಭವ ಎಂಬುದೇ ಇಲ್ಲ.

ಜೀನ್ ಪಾಲ್ ಸಾರ್ತ್ರೆ ಎಂಬ ಚಿಂತಕನ ಪ್ರಕಾರ, ಸ್ವಪ್ರಜ್ಞೆಯೆಂಬುದು ಅನುಭವಕ್ಕೆ ಸೇರಿಸಬೇಕಾದ ಗುಣವಲ್ಲ. ಅದಕ್ಕೆ ಬದಲಾಗಿ, ಯಾವುದೋ ಒಂದು ಅನುಭವದಲ್ಲಿ ಇರುವ ಸ್ಥಿತಿಯೇ ಸ್ವಪ್ರಜ್ಞೆ ಎನ್ನಿಸಿಕೊಳ್ಳುತ್ತದೆ. ಈ ಸ್ವಪ್ರಜ್ಞೆಯೆನ್ನುವುದು ಹೊಸ ಪ್ರಜ್ಞೆಯೇನಲ್ಲ, ಅದಕ್ಕೆ ಬದಲಾಗಿ, ಯಾವುದಾದರೂ ವಸ್ತುವಿನ ಅರಿವು ಇದೆ ಎಂದಂತಾದರೆ, ಆ ಅರಿವಿಗೆ ಕಾರಣವಾದ ಅಸ್ತಿತ್ವದ ಏಕಮೇವ ಬಗೆಯೇ ಅದು (Self-consciousness we ought to consider, not as a new consciousness, but as the only mode of existence which is possible for a consciousness of something).

ಪ್ರತಿಯೊಂದು ಅನುಭವದಲ್ಲಿಯೂ ಸ್ವಪ್ರಜ್ಞೆಯ ಅಂಶವನ್ನು ನಾವು ಸುಲಭವಾಗಿ ಗುರುತಿಸಬಹುದು. ಬಾಹ್ಯವಸ್ತುಗಳ ಅನುಭವದ ಜೊತೆಜೊತೆಗೆ, "ನಾನು ಅನುಭವಿಸುತ್ತಿದ್ದೇನೆ, ಹಾಗೂ ಆ ಅನುಭವವು ಈ ರೀತಿ ಇದೆ" ಎನ್ನುವ ವ್ಯಕ್ತಿನಿಷ್ಠ ಸಂವೇದನೆ ಪ್ರತಿಯೊಬ್ಬ ವ್ಯಕ್ತಿಗೂ ಆಗುತ್ತದೆ. ಅನುಭವದಲ್ಲಿ ಸ್ವಪ್ರಜ್ಞೆಯು ಹಾಸುಹೊಕ್ಕಾಗಿದೆ ಎನ್ನುವುದನ್ನು ಈ ಸಂವೇದನೆ ಸೂಚಿಸುತ್ತದೆ.

ಒಂದು ಮಿಠಾಯಿಯನ್ನು ಸೇವಿಸಿ ಆನಂದಿಸುವುದು ಬೇರೆ, ಆ ಅನುಭವ ಹೇಗಿತ್ತು ಎಂದು ನೆನಪಿಗೆ ತಂದುಕೊಳ್ಳುವುದು ಬೇರೆ. ಮೊದಲನೆಯ ಅನುಭವ ವಸ್ತುನಿಷ್ಠವಾಗಿದ್ದರೆ, ಎರಡನೆಯದು ಸಂಪೂರ್ಣವಾಗಿ ವ್ಯಕ್ತಿನಿಷ್ಠ. ಆದರೆ, ಮೊದಲನೆಯ ಕ್ರಿಯೆಯ ಜೊತೆಗೆ ಅವಿನಾಭಾವವಾಗಿ ಎರಡನೆಯ ಕ್ರಿಯೆಯೂ ಸೇರಿಕೊಂಡಿರುತ್ತದೆ. ಮಿಠಾಯಿಯ ಸವಿಯನ್ನು ಆನಂದಿಸಿದವನು ಅದನ್ನು ಸ್ಮರಣೆಯಲ್ಲಿ ತಂದುಕೊಳ್ಳಲಾಗದಿದ್ದರೆ, ಆ ಕ್ರಿಯೆ ಪ್ರಜ್ಞಾಪೂರ್ವಕವಾಗಿ ನಡೆದಿಲ್ಲ ಎಂದೇ ಹೇಳಬೇಕು. ಆಗ ಅದನ್ನು ಅನುಭವವೆಂದು ಕರೆಯಲಾಗುವುದೇ ಇಲ್ಲ. ಹೀಗಾಗಿ, ಸಂಪೂರ್ಣವಾಗಿ ವಸ್ತುನಿಷ್ಠವಾಗಿರುವ ಅನುಭವವು ಸಾಧ್ಯವಾಗುವುದೇ ಇಲ್ಲ. ಏಕೆಂದರೆ, ಅನುಭವಿಸುವವನ ಪ್ರಜ್ಞೆ ಅಥವಾ ಸ್ವಪ್ರಜ್ಞೆಯ ಅಂಶವಿಲ್ಲದೆಯೇ ಅನುಭವವು ಉಂಟಾಗುವುದಿಲ್ಲ.

ಹೀಗೆ, ಎಲ್ಲಾ ಅನುಭವಗಳಲ್ಲೂ 'ನನ್ನತನ' ವೆಂಬುದು ಅವಿಭಾಜ್ಯ ಅಂಗವಾಗಿರುತ್ತದೆ. ಎಲ್ಲ ಅನುಭವಗಳನ್ನೂ, 'ನಾನು' ಎಂಬುದಕ್ಕೇ ಸಂಬಂಧಿಸಿಕೊಂಡು, 'ನನ್ನ ಅನುಭವಗಳು' ಎಂದೇ ಕರೆಯುತ್ತೇವೆ. ಇದರಿಂದ ತಿಳಿದುಬರುವುದು ಇಷ್ಟು: ಎಲ್ಲ ಅನುಭವಗಳಲ್ಲಿಯೂ 'ನಾನು' ಎಂಬುದರ ಅನುಭವವನ್ನು ಮೊದಲು ಅಪರೋಕ್ಷವಾಗಿ ಗಳಿಸಿಕೊಂಡ ನಂತರವಷ್ಟೇ ಆ 'ನನ್ನತನ' ವನ್ನು ಇತರ ಸಂಗತಿಗಳ ಮೇಲೆ ನಾವು ವಿಸ್ತರಿಸಿಕೊಳ್ಳುತ್ತೇವೆ. ಇದನ್ನೇ ಸಾಮಾನ್ಯ ದೃಷ್ಟಿಯಲ್ಲಿ ಅನುಭವವೆಂದು ಕರೆಯುವುದು. ಇನ್ನೊಂದು ಸ್ವಾರಸ್ಯಕರ ವಿಷಯವೆಂದರೆ, ಬೇರೆ ಸಂಗತಿಗಳನ್ನು ಅನುಭವದ ಸಾಮಗ್ರಿಯೆಂಬಂತೆ, ನಾವು ಸಾಕ್ಷೀಭಾವದಿಂದ ವೀಕ್ಷಿಸುತ್ತೇವೆ. ಆದರೆ 'ನಾನು' ಎಂಬುದು ವೀಕ್ಷಿಸಬಲ್ಲ ವಿಷಯವಾಗಿರುವುದಿಲ್ಲ, ಅದು ಕೇವಲ ವೀಕ್ಷಿಸುವ ವಿಷಯಿಯಾಗಿರುತ್ತದೆ. ಅದರ ಇರುವಿಕೆಯನ್ನು ನಾವು ಯಾವ ಪರೀಕ್ಷೆಗೂ ಒಳಪಡಿಸದೆಯೇ ಒಪ್ಪಿಕೊಳ್ಳುತ್ತೇವೆ. ಏಕೆಂದರೆ ಅದು ಎಲ್ಲ ಅನುಭವಗಳಿಗೂ ಮೂಲಭೂತವಾದ ಸ್ವತಸ್ಸಿದ್ಧ ಅಂಶ.

ಹೀಗೆ, ಯಾವುದೇ ಮಾನಸಿಕ ಕ್ರಿಯೆಯು ಸ್ವಪ್ರಜ್ಞೆಯಿಂದ ಕೂಡಿರದಿದ್ದರೆ, ಅದು ಅನುಭವವಾಗಿ ಮಾರ್ಪಡುವುದಿಲ್ಲ. 'ಅನುಭವವು ಚೈತನ್ಯದ ಅಥವಾ ಅರಿವಿನ ಪ್ರವಾಹ' ಎಂಬ ವ್ಯಾಖ್ಯೆಯಲ್ಲಿ ಅರಿವು ಅಥವಾ ಚೈತನ್ಯವೆನ್ನುವುದು ಸ್ವಪ್ರಜ್ಞೆಯಲ್ಲದೆ ಬೇರೆಯಲ್ಲ. ಇನ್ನೊಂದು ಅಂಶವೆಂದರೆ, ಪ್ರಜ್ಞೆಯಲ್ಲಿ 'ಸ್ವಪ್ರಜ್ಞೆ' ಅಥವಾ 'ಪರಪ್ರಜ್ಞೆ' ಎಂಬ ಭೇದವಿಲ್ಲ. ಒಂದೇ ಪ್ರಜ್ಞೆ ಅಥವಾ ಅರಿವು ವಿವಿಧ ರೂಪಗಳಲ್ಲಿ ಕಾಣಿಸಿಕೊಳ್ಳುತ್ತದೆ, ಅಷ್ಟೆ.

## ಅಲೆದಾಡುವ ಮೀನು

ಇಲ್ಲಿಯವರೆಗೆ ನಾವು ವಿಚಾರಮಾಡಿದ ಪ್ರಜ್ಞೆ, ಅರಿವು ಅಥವಾ ಚೈತನ್ಯವನ್ನೇ ಭಾರತೀಯ ತತ್ತ್ವಶಾಸ್ತ್ರವು ಆತ್ಮ ಎಂದು ಕರೆಯುತ್ತದೆ; ಅದು ನಮ್ಮ ವ್ಯಕ್ತಿತ್ವದ ಮೂಲಸ್ವರೂಪವೆಂದು ಬಗೆಯುತ್ತದೆ. ಈ ಆತ್ಮವು ಅವಿದ್ಯೆಯ ವಶಕ್ಕೆ ಒಳಗಾಗಿ, ಜೀವಿಯ ಭಾವವನ್ನು ಪಡೆದು, ದೇಹೇಂದ್ರಿಯಾದಿಗಳಲ್ಲಿ ತಾದಾತ್ಮ್ಯ ಹೊಂದಿ, ವಿವಿಧ ಅನುಭವಗಳನ್ನು ಹೊಂದುತ್ತದೆ. ಅವು ಜಾಗೃತ್, ಸ್ವಪ್ನ ಮತ್ತು ಸುಷುಪ್ತಿ ಎಂಬ ಮೂರು ವ್ಯಾವಹಾರಿಕ ಸ್ತರಗಳಲ್ಲಿ ಉಂಟಾಗುತ್ತದೆ. ಇದನ್ನೇ ವೇದಾಂತದಲ್ಲಿ 'ಅವಸ್ಥಾತ್ರಯ' ಎಂದು ಕರೆಯುತ್ತಾರೆ.

ಬೃಹದಾರಣ್ಯಕ ಉಪನಿಷತ್ತು ಮೇಲಿನ ಅಂಶವನ್ನು ಮನೋಜ್ಞವಾಗಿ ವರ್ಣಿಸುತ್ತದೆ. ಆತ್ಮನು ಎಂತಹವನು ಎಂಬ ಜನಕನ ಪ್ರಶ್ನೆಗೆ, ಅದು ವಿಜ್ಞಾನಮಯವಾಗಿದೆ ಎಂದು ಉತ್ತರಿಸಿದ ಯಾಜ್ಞವಲ್ಕ್ಯನು ಮುಂದುವರಿದು ಹೇಳುತ್ತಾನೆ: **ಸ ಸಮಾನಃ ಸನ್ ಉಭೌ ಲೋಕಾನ್ ಅನುಸಂಚರತಿ, ಧ್ಯಾಯತೀವ ಲೇಲಾಯತೀವ; ಸ ಹಿ ಸ್ವಪ್ನೋ ಭೂತ್ವೇಮಂ ಲೋಕಮತಿಕ್ರಾಮತಿ....** (ಇಂದ್ರಿಯಗಳ ಮಧ್ಯೆ ಇರುವ, ಬುದ್ಧಿಯಲ್ಲಿದ್ದು ಸ್ವಯಂಜ್ಯೋತಿಯಾಗಿರುವ) ಆ ಪುರುಷನು ಬುದ್ಧಿಗೆ ಸಮಾನವಾದ ಆಕಾರವನ್ನು ಪಡೆದು, ಇಹಲೋಕ ಪರಲೋಕಗಳ ಮಧ್ಯೆ ಸಂಚರಿಸುತ್ತಾನೆ. ಅವನು ಧ್ಯಾನಿಸುವಂತೆಯೂ, ಚಲಿಸುವಂತೆಯೂ ಕಂಡುಬರುತ್ತಾನೆ. ಏಕೆಂದರೆ ಅವನು ಸ್ವಪ್ನರೂಪನಾಗಿ ಈ ಲೋಕವನ್ನು ಅತಿಕ್ರಮಿಸುತ್ತಾನೆ (೪–೩–೭).

ಸ್ಫಟಿಕವು ಸಮೀಪದಲ್ಲಿರುವ ಕೆಂಪು ಹೂವಿನ ಪರಿಣಾಮವಾಗಿ, ಕೆಂಪು ಬಣ್ಣವನ್ನು ತಾಳುತ್ತದೆ. ಅದೇ ರೀತಿ ಅವಿದ್ಯೆಯ ವಶದಿಂದ ಬುದ್ಧಿಯ ಆಕಾರವನ್ನು ಆತ್ಮನು ಪಡೆದುಕೊಂಡು, ಇಹಲೋಕ–ಪರಲೋಕಗಳ ನಡುವೆ ಸಂಚರಿಸುತ್ತಾನೆ. ಇಹ ಲೋಕವೆಂದರೆ, ದೇಹವನ್ನು ಪಡೆದುಕೊಂಡಿರುವ ಸ್ಥಿತಿ. ಪರಲೋಕವೆಂದರೆ, ಅದನ್ನು ಬಿಟ್ಟಿರುವ ಸ್ಥಿತಿ. ಈ ಬಗೆಯ ಚಲನೆಗೆ ಕಾರಣ, ಬುದ್ಧಿಯ ಆಕಾರವನ್ನು ಪಡೆದುಕೊಂಡಿರುವುದೇ ಹೊರತು, ಆತ್ಮನು ಸ್ವಭಾವತಃ ಎಲ್ಲೂ ಸಂಚರಿಸುವುದಿಲ್ಲ. ಹಾಗೆಯೇ, ತಾನು ನಿಷ್ಕ್ರಿಯನಾಗಿದ್ದರೂ, ಧ್ಯಾನಿಸುವವನಂತೆ, ಚಲಿಸುವವನಂತೆ ಆತ್ಮನು ಕಂಡುಬರುತ್ತಾನೆ. ಬುದ್ಧಿಯು ಸ್ವಪ್ನಾವಸ್ಥೆಯನ್ನು ಪಡೆದಾಗ ತಾನೂ ಸ್ವಪ್ನರೂಪನಂತೆ, ಎಲ್ಲ ವ್ಯವಹಾರಗಳೂ ನಡೆಯುವ ಈ ಜಾಗೃದವಸ್ಥೆಯನ್ನು ಮೀರಿದವನಂತೆ ಕಂಡುಬರುತ್ತಾನೆ.

ಬೃಹದಾರಣ್ಯಕ ಉಪನಿಷತ್ತಿನ ಇನ್ನೊಂದು ಮಂತ್ರವು ಆತ್ಮವನ್ನು ಒಂದು ದೊಡ್ಡ ಮೀನಿಗೆ ಹೋಲಿಸುತ್ತದೆ:

**ತದ್ಯಥಾ ಮಹಾಮತ್ಸ್ಯ ಉಭೇ ಕೂಲೇಽನುಸಂಚರತಿ ಪೂರ್ವಂ ಚಾಪರಂ ಚ, ಏವಮೇವಾಯಂ ಪುರುಷ ಏತಾವುಭಾವಂ ತಾವನುಸಂಚರತಿ ಸ್ವಪ್ನಾಂತಂ ಚ ಬುದ್ಧಾಂತಂ ಚ**

"ಒಂದು ದೊಡ್ಡ ಮೀನು ನದಿಯ ಪೂರ್ವ ಮತ್ತು ಪಶ್ಚಿಮ ದಂಡೆಗಳ ನಡುವೆ, ಒಂದು ದಡದಿಂದ ಮತ್ತೊಂದು ದಡಕ್ಕೆ ಕ್ರಮವಾಗಿ ಸಂಚರಿಸುವ ಹಾಗೆ, ಈ ಪುರುಷನು ಸ್ವಪ್ನ ಮತ್ತು ಜಾಗೃತಿ –ಈ ಎರಡೂ ಅವಸ್ಥೆಗಳಿಗೂ ಒಂದಾದ ಮೇಲೆ ಮತ್ತೊಂದರಂತೆ ನಿಯಮಿತವಾಗಿ ಸಂಚರಿಸುತ್ತಾನೆ." (೪–೩–೧೮)

## ಆತ್ಮನ ನಾಲ್ಕು ಪಾದಗಳು

ಮೇಲಿನ ಮಂತ್ರಗಳಲ್ಲಿ, ಆತ್ಮವು ಬುದ್ಧಿಯ ರೂಪವನ್ನು ತಾಳಿ ಅಥವಾ ಬುದ್ಧಿಯಲ್ಲಿ ತಾದಾತ್ಮ್ಯ ಹೊಂದಿ, ಅನುಭವದ ವಿವಿಧ ಸ್ತರಗಳಲ್ಲಿ ಅಲೆದಾಡುವುದರ ಸ್ಪಷ್ಟ ಚಿತ್ರಣವನ್ನು ನಾವು ಕಾಣುತ್ತೇವೆ. ಇದನ್ನೇ ಮಾಂಡೂಕ್ಯೋಪನಿಷತ್ತು ಇನ್ನಷ್ಟು ವಿಶದವಾಗಿ ಹೀಗೆ ವರ್ಣಿಸುತ್ತದೆ:

**ಸರ್ವಂ ಹ್ಯೇತದ್ಬ್ರಹ್ಮಾಯಮಾತ್ಮಾ ಬ್ರಹ್ಮ, ಸೋಽಯಮಾತ್ಮಾ ಚತುಷ್ಪಾತ್ (೨)**

**ಜಾಗರಿತಸ್ಥಾನೋ ಬಹಿಷ್ಪ್ರಜ್ಞಃ.... (೩)**

**ಸ್ವಪ್ನಸ್ಥಾನೋಽಂತಃಪ್ರಜ್ಞಃ...(೪)**

**ಯತ್ರ ಸುಪ್ತೋ ನ ಕಂಚನ ಕಾಮಂ ಕಾಮಯತೇ, ನ ಕಂಚನ ಸ್ವಪ್ನಂ ಪಶ್ಯತಿ, ತತ್ ಸುಷುಪ್ತಮ್ । ಸುಷುಪ್ತಸ್ಥಾನ ಏಕೀಭೂತಃ ಪ್ರಜ್ಞಾನಘನ ಏವಾನಂದಮಯೋ ಹ್ಯಾನಂದಭುಕ್ ಚೇತೋಮುಖಃ ಪ್ರಾಜ್ಞಸ್ತೃತೀಯಃ ಪಾದಃ (೫)**

"ಇವೆಲ್ಲವೂ ಬ್ರಹ್ಮವೇ, ಆತ್ಮನೂ ಬ್ರಹ್ಮನೇ. ಅವನಿಗೆ ನಾಲ್ಕು ಪಾದಗಳಿವೆ. ಮೊದಲನೆಯ ಪಾದ ಜಾಗೃದವಸ್ಥೆ, ಅದು ಹೊರಗಿನ ಪ್ರಜ್ಞೆ ಉಳ್ಳದ್ದು. ಎರಡನೆಯ ಪಾದ ಸ್ವಪ್ನಾವಸ್ಥೆ. ಇದು ಒಳಗಿನ ಪ್ರಜ್ಞೆ ಉಳ್ಳದ್ದು. ಎಲ್ಲಿ ನಿದ್ರಿಸುವವನು ಏನನ್ನೂ ಬಯಸುವುದಿಲ್ಲವೋ, ಯಾವ ಸ್ವಪ್ನವನ್ನೂ ನೋಡುವುದಿಲ್ಲವೋ ಅದು ಸುಷುಪ್ತಿ. ಸುಷುಪ್ತಿ ಸ್ಥಾನದಲ್ಲಿ ಜಾಗೃತ್–ಸ್ವಪ್ನಗಳು ಏಕೀಭೂತವಾದ ಸ್ಥಿತಿಯಲ್ಲಿರುವ, ಪ್ರಜ್ಞಾನಘನಮಾತ್ರನೂ, ಆನಂದಮಯನೂ, ಆನಂದವನ್ನು ಅನುಭವಿಸುತ್ತಿರುವವನೂ, ಚೇತೋಮುಖನೂ ಆದ ಪ್ರಾಜ್ಞನು ಮೂರನೆಯ ಪಾದ."

ಮೇಲೆ ಉಲ್ಲೇಖಿಸಿರುವ ಮೊದಲನೆಯ ಮಂತ್ರವು ಬ್ರಹ್ಮ ಮತ್ತು ಆತ್ಮರ ಅಭೇದವನ್ನು ಹೇಳಿ, ಅಸ್ತಿತ್ವದ ಅಖಂಡತೆಯನ್ನು ಸಾರುತ್ತದೆ. ಎರಡನೆಯ ಮಂತ್ರವು ಆತ್ಮನ ಮೊದಲನೆಯ ಪ್ರಜ್ಞಾಸ್ತರವಾದ ಜಾಗೃದವಸ್ಥೆಯನ್ನು ಆತ್ಮನ ಹೊರಗಿನ ಅರಿವು ಉಳ್ಳ ಸ್ಥಿತಿ ಎಂದು ವರ್ಣಿಸುತ್ತದೆ. ಹಾಗೆಯೇ ಬಾಹ್ಯ ಜಗತ್ತಿನ ಅವಲಂಬನೆ ಇಲ್ಲದ ಸ್ವಪ್ನಾವಸ್ಥೆಯನ್ನು ಒಳಗಿನ ಪ್ರಜ್ಞೆ ಉಳ್ಳ ಸ್ಥಿತಿ ಎಂದು ವರ್ಣಿಸುತ್ತದೆ, ಇಲ್ಲಿ ಒಳಗಿನದು ಎಂದರೆ, ಇಂದ್ರಿಯಗಳಿಗೂ ಒಳಗಿರುವ ಮನಸ್ಸಿನ ವಾಸನೆಗಳ ರೂಪದಲ್ಲಿ ಕಾಣಿಸಿಕೊಳ್ಳುವ ಪ್ರಜ್ಞೆ ಎಂದು ಅರ್ಥ.

ಸುಷುಪ್ತಿಯೆಂಬುದು ಮತ್ತೂ ಒಳಗಿನ ಸ್ಥಿತಿ. ಎಚ್ಚರ ಮತ್ತು ಸ್ವಪ್ನಾವಸ್ಥೆಗಳಲ್ಲಿ ಮನಸ್ಸು ದ್ವೈತ ಭಾವನೆಗಳಿಂದ ಕೂಡಿ ಪ್ರಕ್ಷುಬ್ಧವಾಗಿರುತ್ತದೆ. ಈ ದ್ವೈತಭಾವನೆಯು, ತನ್ನ ರೂಪವನ್ನು ಬಿಡದೆ, ಮೊದಲಿನೆರಡು ಅವಸ್ಥೆಗಳಲ್ಲಿ ಕಾಣಬರುವ ಚಲನೆಯನ್ನು ಕಳೆದುಕೊಂಡು, ಏಕೀಭೂತವಾದಂತೆ ಸುಷುಪ್ತಿಯಲ್ಲಿ ತೋರುತ್ತದೆ. ರಾತ್ರಿಯು ಹಗಲನ್ನು ಆವರಿಸಿಕೊಂಡಂತೆ, ಎಚ್ಚರ ಮತ್ತು ಸ್ವಪ್ನಾವಸ್ಥೆಗಳು ಸುಷುಪ್ತಿಯಲ್ಲಿ ಲಯವಾಗುತ್ತವೆ. ಹಾಗೆಯೇ ಮೇಲಿನೆರಡು ಅವಸ್ಥೆಗಳಲ್ಲಿ ಕಾಣಿಸಿಕೊಳ್ಳುವ ವಿವಿಧ ರೀತಿಯ ಪ್ರಜ್ಞಾಸ್ಥಿತಿಗಳು, ಸುಷುಪ್ತಿಯಲ್ಲಿ ಅವುಗಳ ವೈವಿಧ್ಯವನ್ನು ಕಳೆದುಕೊಂಡು ನಿರಂತರವಾದ ಪ್ರಜ್ಞೆಯ ಗಟ್ಟಿಯಂತೆ ಆಗುತ್ತವೆ. ಅಂದರೆ, ವಿವಿಧ ವಸ್ತುಗಳನ್ನು ಅನುಭವಿಸುವಾಗ, ಭಾವಿಸುವಾಗ ಒಂದೇ ಪ್ರಜ್ಞೆಯು ನೂರಾರು ಕವಲುಗಳಾಗಿ ಹರಿಯುತ್ತದೆ. ಸುಷುಪ್ತಿಯಲ್ಲಿ ಆ ಎಲ್ಲ ಅನುಭವಗಳ ಪ್ರಜ್ಞೆಯೂ ಒಂದೇ ಆಗಿ ಕಾಣಿಸಿಕೊಳ್ಳುತ್ತದೆ. ಇದನ್ನೇ ಉಪನಿಷತ್ತು, **ಪ್ರಜ್ಞಾನಘನ** ಎಂಬ ಶಬ್ದದ ಮೂಲಕ ಸೂಚಿಸುತ್ತದೆ.

ಬೇರೆ ಬೇರೆ ವಿಷಯಗಳ ಆಕಾರವಾಗಿ ಪ್ರಜ್ಞೆಯು ವಿಭಜನಗೊಳ್ಳುವುದನ್ನು ಆಯಾಸವೆಂದು ಭಾವಿಸುವುದಾದರೆ, ಅಂತಹ ಶ್ರಮ ಇಲ್ಲಿರುವುದಿಲ್ಲ. ಈ ಬಗೆಯ ಅನಾಯಾಸದ ಸ್ಥಿತಿಯೇ ಆನಂದ. ಆತ್ಮನು ಅದನ್ನು ಅನುಭವಿಸುತ್ತಿರುವುದರಿಂದ **'ಆನಂದಮಯ'** ಎಂದು ಉಪನಿಷತ್ತು ಅವನನ್ನು ಕರೆದಿದೆ. ದೈನಂದಿನ ಜೀವನದಲ್ಲಿ ಯಾವ ಆಯಾಸವೂ ಇಲ್ಲದ ಸುಖಿಯು ಆನಂದವನ್ನು ಅನುಭವಿಸುತ್ತಾನೆ. ಆತ್ಮವೂ ಹೀಗೆಯೇ ನಿರಾಯಾಸ ಸ್ಥಿತಿಯಲ್ಲಿ ಇರುತ್ತದೆ. ಆದ್ದರಿಂದ ಶ್ರುತಿಯು **'ಆನಂದಭುಕ್'** – ಆನಂದವನ್ನು ಅನುಭವಿಸುವವನು ಎಂಬ ಇನ್ನೊಂದು ವಿಶೇಷಣವನ್ನು ಸುಷುಪ್ತಿಯಲ್ಲಿರುವ ಆತ್ಮನಿಗೆ ಸೇರಿಸುತ್ತದೆ.

ಸುಷುಪ್ತಿ ಸ್ಥಿತಿಯು ಎಚ್ಚರದ ಮತ್ತು ಕನಸಿನ ಪ್ರಜ್ಞಾಸ್ಥಿತಿಗಳಿಗೆ ದ್ವಾರದಂತೆ ಇದೆ. ಅಂದರೆ, ಸುಷುಪ್ತಿ ಕಳೆದಾಗ, ಎಚ್ಚರದ ಅಥವಾ ಸ್ವಪ್ನದ ಅರಿವು ನಮಗೆ ಆಗುತ್ತದೆ. ಆದ್ದರಿಂದ, ಅದನ್ನು ಉಪನಿಷತ್ತು **ಚೇತೋಮುಖ** ಎಂದು ಕರೆದಿದೆ.

ಎಚ್ಚರದ ಸ್ಥಿತಿಯನ್ನು ಅನುಭವಿಸುವ ಆತ್ಮವನ್ನು **ವೈಶ್ವಾನರ** ಎಂದೂ, ಸ್ವಪ್ನಾವಸ್ಥೆಯ ಪ್ರಜ್ಞೆಯನ್ನು ಅನುಭವಿಸುವವನ್ನು **ತೈಜಸ** ಎಂದೂ, ಸುಷುಪ್ತಾವಸ್ಥೆಯ ಪ್ರಜ್ಞೆಯನ್ನು ಅನುಭವಿಸುವವನ್ನು **ಪ್ರಾಜ್ಞ** ಎಂದೂ ಉಪನಿಷತ್ತು ಕರೆಯುತ್ತದೆ. ಆತ್ಮನೇ ವಿಶ್ವವೂ ಅದರ ಜೀವರೂ ಆಗಿದ್ದಾನೆ. ಆದ್ದರಿಂದ ಅವನು 'ವೈಶ್ವಾನರ'. ಬಾಹ್ಯ ವಿಷಯಗಳ ಅಭಾವದ ಸ್ಥಿತಿಯಲ್ಲಿಯೂ, ಪ್ರಜ್ಞೆಯನ್ನು ಅನುಭವಿಸುವವನಾಗಿದ್ದರಿಂದ 'ತೈಜಸ' ಎಂಬ ಹೆಸರು ಆತ್ಮನಿಗೆ ಬಂದಿದೆ. ಹಿಂದಿನದೂ, ಮುಂದಿನದೂ ಎಲ್ಲ ವಿಷಯಗಳೂ ಈತನ ಪ್ರಜ್ಞಾಸ್ತರಕ್ಕೇ ಒಳಪಡುತ್ತವೆಯಾದ್ದರಿಂದ ಅವನಿಗೆ **'ಪ್ರಾಜ್ಞ'** ಎಂದು ಹೆಸರು.

ಎಚ್ಚರ, ಕನಸು ಮತ್ತು ಸುಷುಪ್ತಿಗಳಿಗಿಂತ ಉನ್ನತವಾದ ಸ್ಥಿತಿಯೇ **'ತುರೀಯ'** (ನಾಲ್ಕನೆಯದು). ಅದರ ವರ್ಣನೆಯನ್ನು ಉಪನಿಷತ್ತು ಹೀಗೆ ಮಾಡುತ್ತದೆ:

**ನಾಂತಃಪ್ರಜ್ಞಂ ನ ಬಹಿಃಪ್ರಜ್ಞಂ ನೋಭಯತಃ ಪ್ರಜ್ಞಂ ನ ಪ್ರಜ್ಞಾನ ಘನಂ ನ ಪ್ರಜ್ಞಂ ನಾಪ್ರಜ್ಞಂ ಅದೃಶ್ಯಮ್ ಅವ್ಯವಹಾರ್ಯಮ್ ಅಗ್ರಾಹ್ಯಮ್ ಅಲಕ್ಷಣಮ್ ಅಚಿಂತ್ಯಮ್ ಅವ್ಯಪದೇಶ್ಯಮ್ ಏಕಾತ್ಮ ಪ್ರತ್ಯಯಸಾರಂ ಪ್ರಪಂಚೋಪಶಮಂ ಶಾಂತಂ ಶಿವಮ್ ಅದ್ವೈತಂ ಮನ್ಯಂತೇ ಸ ಆತ್ಮಾ ಸ ವಿಜ್ಞೇಯಃ**

"ತುರೀಯನು ಅಂತಃಪ್ರಜ್ಞನಲ್ಲ, ಬಹಿಃಪ್ರಜ್ಞನಲ್ಲ, ಉಭಯ ಪ್ರಜ್ಞನಲ್ಲ, ಪ್ರಜ್ಞಾನಘನವಲ್ಲ, ಪ್ರಜ್ಞನಲ್ಲ, ಅಪ್ರಜ್ಞನಲ್ಲ. ಅವನು ಅದೃಶ್ಯನು, ವ್ಯವಹಾರಕ್ಕೆ ನಿಲುಕದವನು. ಗ್ರಹಿಸುವುದಕ್ಕೆ ಆಗದವನು. ಲಕ್ಷಣರಹಿತನು, ಚಿಂತಿಸಲು ಆಗದವನು, ಶಬ್ದಗಳಿಂದ ನಿರ್ದೇಶಿಸಲು ಸಾಧ್ಯವಾಗದವನು, ಏಕಾತ್ಮಪ್ರತ್ಯಯನು, ಪ್ರಪಂಚ ಉಪಶಮನು, ಶಾಂತನು, ಶಿವನು, ಅದ್ವೈತನು. ಇಂಥವನನ್ನು ತುರೀಯನೆಂದು ಕರೆಯುತ್ತಾರೆ. ಅವನೇ ಆತ್ಮನು. ಅವನನ್ನು ಅರಿತುಕೊಳ್ಳಬೇಕು." (೭)

ಮೊದಲ ಮೂರು ಅವಸ್ಥೆಗಳು ಅವಿದ್ಯೆಯಿಂದ ಉಂಟಾದುವು. ನಾಲ್ಕನೆಯದು ಆತ್ಮನ ನೈಜ ಸ್ಥಿತಿ. ಹಗ್ಗವನ್ನು ಹಾವಾಗಿ ನೋಡಿದರೂ ಅದು ಹಗ್ಗವಾಗಿಯೇ ಇರುವಂತೆ, ಆತ್ಮವನ್ನು ಎಚ್ಚರ, ಕನಸು ಮತ್ತು ಸುಷುಪ್ತಿಗಳಲ್ಲಿ ತಪ್ಪಾಗಿ ಗ್ರಹಿಸಿದರೂ, ಅದು ಎಂದೆಂದಿಗೂ ಅದ್ವೈತ ಸ್ಥಿತಿಯಾದ ತುರೀಯದಲ್ಲೇ ಇರುತ್ತದೆ. ಹಾಗೆಂದೇ, ಮೇಲಿನ ಮಂತ್ರದಲ್ಲಿ ಉಳಿದ ಅವಸ್ಥೆಗಳನ್ನು ಉಪನಿಷತ್ತು ನಿರಾಕರಿಸುತ್ತದೆ.

ಎಚ್ಚರ ಮುಂತಾದ ಅವಸ್ಥೆಗಳಲ್ಲಿ, ಅನುಭವಕ್ಕೆ ಕಾರಣವಾಗುವ ವೃತ್ತಿಗಳು ಬದಲಾದರೂ ಈ ಆತ್ಮನೊಬ್ಬನೇ ಬದಲಾಗದೆ ಇರುತ್ತಾನೆ. ಅಥವಾ ತುರೀಯದಲ್ಲಿ ಉಂಟಾಗುವ ಅರಿವಿಗೆ ಆತ್ಮವೊಂದೇ ಆಧಾರ. ಏಕೆಂದರೆ, ಅಲ್ಲಿ ಬೇರೆ ಯಾವ ವಸ್ತುವಿನ ಅರಿವೂ ಇರುವುದಿಲ್ಲ. ಹಾಗೆಂದೇ ಉಪನಿಷತ್ತು ಆತ್ಮವನ್ನು **ಏಕಾತ್ಮಪ್ರತ್ಯಯಸಾರ** ಎಂದು ಕರೆಯುತ್ತದೆ. ಪ್ರಕ್ಷುಬ್ಧತೆಗೆ ಎಡೆ ಮಾಡಿಕೊಡುವ ಯಾವ ದ್ವೈತಭಾವನೆಯೂ ಇಲ್ಲಿ ಇಲ್ಲ. ಆದ್ದರಿಂದಲೇ ತುರೀಯವನ್ನು **ಪ್ರಪಂಚವೆಲ್ಲ ಶಮನವಾದ ಸ್ಥಿತಿಯೆಂದೂ ಶಿವನೆಂದೂ ಶಾಂತ**ನೆಂದೂ ಉಪನಿಷತ್ತು ಬಣ್ಣಿಸುತ್ತದೆ.

## ಆನಂದೋ ಬ್ರಹ್ಮೇತಿ ವ್ಯಜಾನಾತ್

ಹೀಗೆ **ಪರಿಶುದ್ಧ ಅನುಭವ ಮತ್ತು ಆತ್ಮ** – ಇವು ಬೇರೆ ಬೇರೆ ಅಲ್ಲ ಎಂದು ಮಾಂಡೂಕ್ಯೋಪನಿಷತ್ತು ಅವಸ್ಥಾತ್ರಯದ ಆಧಾರದ ಮೇಲೆ ಪ್ರತಿಪಾದಿಸುತ್ತದೆ. ಈ ಪರಿಶುದ್ಧ ಅನುಭವವೇ **'ಆನಂದ'** ಎಂದು ತೈತ್ತಿರೀಯೋಪನಿಷತ್ತು ಪಂಚಕೋಶಗಳ ವಿವರಣೆಯ ಮೂಲಕ ವಿವರಿಸುತ್ತದೆ. ಒಂದು ಅಂಶವನ್ನು ಇಲ್ಲಿ ಗಮನಿಸಬೇಕು. ಮಾಂಡೂಕ್ಯೋಪನಿಷತ್ತು ಸುಷುಪ್ತಿಯ ಸಂದರ್ಭದಲ್ಲಿ ಹೇಳುವ ಆನಂದ ಬೇರೆ ಮತ್ತು ತೈತ್ತಿರೀಯ ಉಪನಿಷತ್ತು ಹೇಳುವ ಆನಂದ ಬೇರೆ. ಮೊದಲನೆಯ ಸಂದರ್ಭದಲ್ಲಿ, ಅದು ಎಚ್ಚರ ಮತ್ತು ಕನಸಿನ ಅಭಾವದ ನಿರಾಯಾಸ ಸ್ಥಿತಿಯನ್ನು ಮಾತ್ರ ಸೂಚಿಸಿದರೆ, ಎರಡನೆಯ ಸಂದರ್ಭದಲ್ಲಿ ಅದು ಆತ್ಮನ ಸ್ವರೂಪವನ್ನೇ ಸೂಚಿಸುತ್ತದೆ.

ತೈತ್ತಿರೀಯೋಪನಿಷತ್ತಿನ ಭೃಗುವಲ್ಲಿಯಲ್ಲಿ ಬ್ರಹ್ಮವನ್ನು ತಿಳಿದುಕೊಳ್ಳಲು ಬಯಸುವ ಶಿಷ್ಯನು, ಕ್ರಮವಾಗಿ ಬ್ರಹ್ಮವನ್ನು 'ಅನ್ನ(ಆಹಾರ)', ಪ್ರಾಣ, ಮನಸ್ಸು, ಬುದ್ಧಿ ಎಂದು ತಿಳಿದುಕೊಳ್ಳುತ್ತಾನೆ. ಏಕೆಂದರೆ ಆಯಾ ಹಂತಗಳಲ್ಲಿ, ಅವುಗಳಿಂದಲೇ ಜೀವಿಗಳು ಹುಟ್ಟುತ್ತವೆ, ಹುಟ್ಟಿದವುಗಳು ಜೀವಿಸುತ್ತವೆ ಮತ್ತು ಕಡೆಗೆ ಅವುಗಳಲ್ಲೇ ಲಯವನ್ನು ಹೊಂದುತ್ತವೆ. ಇಲ್ಲಿ ಕ್ರಮೇಣ ಶಿಷ್ಯನು ತಪಸ್ಸಿನ ಬಲದಿಂದ ತನ್ನ ಅರಿವನ್ನು ಆತ್ಮದ ಸಮೀಪಕ್ಕೆ ಕರೆದೊಯ್ಯುತ್ತಾನೆ. ಇಷ್ಟಾದರೂ ಇದು ಸೀಮಿತ ಜ್ಞಾನ.

ಕಡೆಗೆ ಆತ್ಮನು ಆನಂದಸ್ವರೂಪ ಎಂದು ಅವನು ತಿಳಿದುಕೊಳ್ಳುತ್ತಾನೆ, ಆನಂದದಿಂದಲೇ ಜೀವಿಗಳು ಹುಟ್ಟುತ್ತವೆ, ಜೀವಿಸುತ್ತವೆ, ಅದರಲ್ಲೇ ಲಯವನ್ನು ಹೊಂದುತ್ತವೆ ಎಂದು ಆಗ ತಿಳಿಯುತ್ತಾನೆ. ಇದೇ ಪಾರಮಾರ್ಥಿಕವಾದ, ನೈಜವಾದ ಜ್ಞಾನ. ಏಕೆಂದರೆ, ಮಾನವನ ವ್ಯಕ್ತಿತ್ವದಲ್ಲಿ, ಆನಂದವೆಂಬುವುದು ಅನ್ನ, ಪ್ರಾಣ, ಮನಸ್ಸು, ಬುದ್ಧಿ ಇವುಗಳೆಲ್ಲದಕ್ಕಿಂತಲೂ ಸೂಕ್ಷ್ಮವಾಗಿ ಇರುವಂಥದ್ದು. ಅದಕ್ಕಿಂತ ಆತ್ಮನಿಗೆ ಸನಿಹವಾದದ್ದು ಬೇರೆ ಏನೂ ಇಲ್ಲ. ಏಕೆಂದರೆ, ಆನಂದವೆಂಬುದು ಆತ್ಮನ ಮೇಲೆ ಆರೋಪಿತವಾದ ಗುಣವಲ್ಲ. ಅದು ಆತ್ಮನ ಸ್ವರೂಪವೇ ಆಗಿದೆ. ಹೀಗಾಗಿ ಪರಿಶುದ್ಧ ಆನಂದಕ್ಕೂ ಆತ್ಮನಿಗೂ ಯಾವ ವ್ಯತ್ಯಾಸವೂ ಇಲ್ಲ.

## ಭಾರತೀಯ ಚಿಂತನೆಯ ವೈಶಿಷ್ಟ್ಯ

ಅನುಭವವನ್ನು ಪ್ರಜ್ಞಾಪ್ರವಾಹವೆಂದೂ, ಸ್ವಪ್ರಜ್ಞೆಯು ಎಲ್ಲ ಅನುಭವಗಳ ಅವಿಭಾಜ್ಯ ಅಂಗವೆಂದೂ ಪಾಶ್ಚಾತ್ಯ ಚಿಂತನೆಯು

ಗುರುತಿಸಿದೆ. ಆದರೆ ಪ್ರಜ್ಞೆಯ ಅಖಂಡತೆಯನ್ನು ಎತ್ತಿಹಿಡಿದಿರುವುದು ಮತ್ತು ಅದು ಆತ್ಮಕ್ಕಿಂತ ಅಭಿನ್ನವೆಂದು ಕಂಡುಹಿಡಿದಿರುವುದೇ ಉಪನಿಷತ್ತುಗಳ ಹೆಗ್ಗಳಿಕೆ. ಅದಲ್ಲದೆ, ಪಾಶ್ಚಾತ್ಯ ಚಿಂತಕರು ಪ್ರಕೃತಿಗೆ ಸಂಬಂಧಪಟ್ಟದ್ದನ್ನು ಮಾತ್ರವೇ ಅನುಭವವೆಂದು ಪರಿಗಣಿಸುತ್ತಾರೆ. ಆದರೆ, ನೈಜ ಅನುಭವವು ಪ್ರಕೃತಿಗೆ ಅತೀತವಾದ ಪರಿಶುದ್ಧ ಆತ್ಮನ ನೆಲೆಯಲ್ಲಿ ಮಾತ್ರ ಸಾಧ್ಯ ಎಂದು ಉಪನಿಷತ್ತುಗಳು ಪ್ರತಿಪಾದಿಸುತ್ತವೆ. ಕೆಳಹಂತಗಳಲ್ಲಿ, ಅವಿದ್ಯೆ ಅಥವಾ ಮಾಯೆಯ ಪ್ರಭಾವದಿಂದ ಆತ್ಮವು ವಿವಿಧ ಪಾತ್ರಗಳನ್ನು ತಳೆದಂತೆ ಕಂಡರೂ, ಅದರ ಪರಿಶುದ್ಧ ಅದ್ವೈತ ಸ್ವಭಾವಕ್ಕೆ ಎಂದಿಗೂ ಕುಂದುಬರದು. ಅದನ್ನೇ ಮಾಂಡೂಕ್ಯೋಪನಿಷತ್ತು 'ತುರೀಯ' ಎಂದು ಕರೆದಿರುವುದು. ಈ ತುರೀಯಾವಸ್ಥೆ ಮತ್ತು ಆತ್ಮ ಬೇರೆ ಬೇರೆ ಅಲ್ಲ. ತುರೀಯವೇ ಆತ್ಮನ ನೈಜ ಸ್ಥಿತಿ. ಅಂಥ ಆತ್ಮನು ಆನಂದಸ್ವರೂಪನು ಎಂದು ತೈತ್ತಿರೀಯ ಉಪನಿಷತ್ತು ಹೇಳುತ್ತದೆ.

ಇದರಿಂದ 'ಪರಿಶುದ್ಧ ಅನುಭವ' ಮತ್ತು 'ಆನಂದ' ಇವೆರಡೂ ಬೇರೆ ಬೇರೆಯಲ್ಲ ಎನ್ನುವುದು ನಮಗೆ ಗೊತ್ತಾಗುತ್ತದೆ. ಹೀಗಾಗಿ ನೈಜ ಆನಂದ ಎನ್ನುವುದು ಬುದ್ಧಿ ಮತ್ತು ಮನಸ್ಸುಗಳ ಮೂಲಕ ಅನುಭವಿಸುವ ಸ್ಥಿತಿಯಲ್ಲ. ಅದಕ್ಕೆ ಬದಲಾಗಿ, ಅವುಗಳ ಮೂಲಕ ಒದಗಿಬರುವ ಎಲ್ಲ ಅನುಭವಗಳೂ ಲಯವಾದಾಗ, ಯಾವ ಪರಿಶುದ್ಧ ಅನುಭವದ ಸ್ಥಿತಿ ಉಳಿಯುವುದೋ ಅದೇ ಆನಂದ. ಆ ಆನಂದವು ಎಚ್ಚರ, ನಿದ್ರೆ, ಸುಷುಪ್ತಿಗಳಲ್ಲಿಯೂ ಅವಿನಾಭಾವವಾಗಿ ಇದ್ದೇ ಇರುತ್ತದೆ. ಆದರೆ ನಮ್ಮ ತಪ್ಪು ಗ್ರಹಿಕೆಯಿಂದಾಗಿ, ಅದನ್ನು ಬೇರೆ ಬೇರೆ ವಿಷಯಗಳನ್ನು ಗ್ರಹಿಸುವುದರಿಂದ ಉಂಟಾಗುವ ಸುಖವೆಂಬಂತೆ ಖಂಡಖಂಡವಾಗಿ ನಾವು ನೋಡುತ್ತೇವೆ, ಅಷ್ಟೇ. ಯಾವಾಗ ಪ್ರಜ್ಞೆಯ ಎಲ್ಲಾ ಹಂತಗಳಲ್ಲೂ ಆನಂದವೇ ಇರುವುದೆಂಬ ತಿಳಿವಳಿಕೆ ಬರುತ್ತದೆಯೋ, ಆಗ ಸೀಮಿತ ಅನುಭವಗಳಾದ ಎಚ್ಚರ, ನಿದ್ರೆ, ಸುಷುಪ್ತಿಗಳು ಅಳಿದು, ನೈಜ ಸ್ಥಿತಿಯೊಂದೇ ಪ್ರಜ್ಞೆಗೆ ಗೋಚರವಾಗುತ್ತದೆ. ಅದೇ ನಿಜವಾದ, ಏಕಮಾತ್ರ ಅನುಭವ. ಇದನ್ನೇ 'ಬ್ರಹ್ಮಾನಂದ' ಅಥವಾ 'ಆತ್ಮಾನಂದ' ಎಂದು ಹೇಳುವುದು.

ಹೀಗೆ ಮಾನವನ ಸ್ವಭಾವವೇ ಆನಂದ ಎಂದು ಘೋಷಿಸುವ ಮೂಲಕ, ದುಃಖಶೋಕಗಳ ಸತ್ಯತ್ವವನ್ನೇ ಉಪನಿಷತ್ತುಗಳು ತಳ್ಳಿಹಾಕುತ್ತವೆ. ಈ ಆನಂದಕ್ಕೆ ಹೊರತಾದ ಎಲ್ಲ ಅನುಭವಗಳೂ, ಆನಂದಾನುಭವದ ಭ್ರಮೆ ಮಾತ್ರವೆಂದು ತಿಳಿಸುತ್ತ, ಅವುಗಳನ್ನು ಮೀರಿಹೋಗಬೇಕೆಂದು ಕರೆನೀಡುತ್ತದೆ. ಈ ಮೂಲಕ ಅಪೂರ್ವ ಅನುಭವದ ವಾರಸುದಾರರೆಂಬ ಘನತೆ, ಗೌರವಗಳನ್ನು ಮಾನವ ಜನಾಂಗಕ್ಕೆ ತಂದುಕೊಡುತ್ತದೆ.

## ಉಪಸಂಹಾರ

ಕಳೆದ ನಾಲ್ಕು ಸಂಚಿಕೆಗಳಲ್ಲಿ ಸತ್-ಚಿತ್-ಆನಂದ - ಈ ಪರಿಕಲ್ಪನೆಯನ್ನು ಪ್ರಾಚ್ಯ ಮತ್ತು ಪಾಶ್ಚಾತ್ಯ ತತ್ತ್ವಶಾಸ್ತ್ರಗಳ ದೃಷ್ಟಿಕೋನಗಳ ತುಲನೆಯ ಮೂಲಕ ಅಧ್ಯಯನ ಮಾಡಿದೆವು. ವೇದಾಂತವು ಈ ಮೂರನ್ನು ಬ್ರಹ್ಮನ ಅಥವಾ ಪರಮಸತ್ಯದ ಸ್ವರೂಪಲಕ್ಷಣಗಳೆಂದು ಹೇಳುತ್ತದೆ. ಅಂದರೆ, ಈ ಮೂರೂ ಬ್ರಹ್ಮನ ಸ್ವರೂಪವೇ ಆಗಿವೆ; ಅದರ ಅವಿಭಾಜ್ಯ ಲಕ್ಷಣಗಳೇ ಆಗಿವೆ.

ಅಸ್ತಿತ್ವ-ಜ್ಞಾನ-ಅನುಭವಗಳನ್ನು ಸೂಚಿಸುವ ಈ ಲಕ್ಷಣಗಳು ನಾವು ಕಾಣುವ ಎಲ್ಲ ಸೃಷ್ಟಿಯ ಸತ್ವವೇ ಆಗಿವೆ ಎಂಬುದನ್ನು ಸುಲಭವಾಗಿ ಗ್ರಹಿಸಬಹುದು. ಹೀಗಾಗಿ ಭಾರತೀಯ ತತ್ತ್ವಶಾಸ್ತ್ರದ ಆಶಯವೆಂದರೆ, ಇಡೀ ಸೃಷ್ಟಿಯು ಭಗವಂತನಿಗಿಂತ ಅಭಿನ್ನ ಎನ್ನುವುದೇ ಆಗಿದೆ. ವೇದಾಂತವು ಬೋಧಿಸುವ ದೇವರು ಎಲ್ಲವನ್ನೂ ಒಳಗೊಂಡಂತಹ, ಎಲ್ಲದರಿಂದಲೂ ಅಭಿನ್ನವಾದಂತಹ ದೇವರು. ಇಲ್ಲಿ ದೇವರೆಂಬುದು ವ್ಯಕ್ತಿಯಲ್ಲ, ತತ್ತ್ವ ; ಯಾವದನ್ನು ಬಿಟ್ಟರೆ ಏನೂ ಇಲ್ಲವೋ ಅಂತಹ ತತ್ತ್ವ. ಇಂತಹ ಪರಿಕಲ್ಪನೆಗಿಂತಲೂ ಉದಾರವಾದ, ವಿಶಾಲವಾದ ದೇವರ ಕಲ್ಪನೆ ಇರಲು ಸಾಧ್ಯವಿಲ್ಲ. ಇದೇ ವೇದಾಂತದ ಹೆಗ್ಗಳಿಕೆ.

ಮಾನವಜೀವಿತವು ಸೀಮಿತವೆಂಬಂತೆ ಕಂಡುಬಂದರೂ ಅದು, ಈ ಅನಂತ ವಿಶ್ವವ್ಯಾಪಿ ತತ್ತ್ವದಲ್ಲಿ ಏಕತೆಯನ್ನು ಕಂಡುಕೊಳ್ಳುವ ಪ್ರಯತ್ನಕ್ಕೆ ಇರುವ ಒಂದು ಅಪೂರ್ವ ಅವಕಾಶ. ಹೀಗಾಗಿ ಬದುಕೆಂಬುದು ಸವೆಸುವುದಲ್ಲ, ವಿಕಾಸಗೊಳ್ಳುವುದು, ಕಲಿತುಕೊಳ್ಳುವುದು, ಆವಿಷ್ಕರಿಸುವುದು. ಹೀಗೆ ವೇದಾಂತವು ಅತ್ಯುನ್ನತ ಧ್ಯೇಯವೊಂದನ್ನು ಮಾನವನ ಮುಂದಿಡುತ್ತದೆ. ಆ ಮೂಲಕ ಜೀವನವನ್ನು ಎಲ್ಲ ರೀತಿಯಲ್ಲಿಯೂ ಗುಣಾತ್ಮಕವನ್ನಾಗಿ, ಶ್ರೇಷ್ಠಮಟ್ಟದ್ದನ್ನಾಗಿ ಮಾಡಲು ಮಾನವಜನಾಂಗಕ್ಕೆ ಪ್ರೇರಣೆ ನೀಡುತ್ತದೆ. ಇದನ್ನು ಸಾಧಿಸಲು ಮಾಡಬೇಕಾದ ಪ್ರಜ್ಞಾಪೂರ್ವಕ ಪ್ರಯತ್ನವನ್ನೇ **'ಆಧ್ಯಾತ್ಮಿಕ ಸಾಧನೆ'** ಎಂದು ನಾವು ಕರೆಯುತ್ತೇವೆ.

ಆಧ್ಯಾತ್ಮಿಕ ಸಾಧನೆಯೆಂದರೆ, ಬದುಕಿನ ವಾಸ್ತವಿಕತೆಗಳಿಂದ ಪಲಾಯನ ಮಾಡಿ, ನಮ್ಮಲ್ಲಿಲ್ಲದ ಏನನ್ನೋ ಗಳಿಸಿಕೊಳ್ಳುವುದಲ್ಲ. ಅದಕ್ಕೆ ಬದಲಾಗಿ, ನಮ್ಮ ಜೀವಿತವನ್ನು ಉನ್ನತವಾದ ಹಾಗೂ ಉತ್ಕಟವಾದ ಪ್ರಜ್ಞೆಯಿಂದ ಬಾಳುತ್ತ, ನಮ್ಮ ವ್ಯಕ್ತಿತ್ವದ ಸ್ತರವನ್ನು ಏರಿಸಿಕೊಳ್ಳುತ್ತ ಹೋಗುವುದು, ಪರಿಪೂರ್ಣತೆಯತ್ತ ದಾಪುಗಾಲು ಹಾಕುವುದು.

ಅಮೂರ್ತವಾದ ಪರಿಪೂರ್ಣತೆಯನ್ನೇ **'ದೇವರು'** ಎಂಬ ಮೂರ್ತರೂಪದಲ್ಲಿ ಮಾನವನು ಭಾವಿಸಿಕೊಳ್ಳುತ್ತಾನೆ. ಆದ್ದರಿಂದಲೇ ದೇವರು ಎಂಬ ಪರಿಕಲ್ಪನೆಯು ಅತ್ಯಂತ ವಿಶಾಲವೂ, ಉನ್ನತವೂ, ನಮಗೆ ಅತ್ಯಂತ ಹತ್ತಿರದ್ದೂ, ಸಾರ್ವಕಾಲಿಕ ಹಾಗೂ ಸಾರ್ವಭೌಮಿಕವೂ ಆಗಿರುವುದು ಅವಶ್ಯ. 'ಸಚ್ಚಿದಾನಂದ' ಎನ್ನುವುದು ಅಂತಹ ಅನುಪಮ ತತ್ತ್ವವಾಗಿದೆ. ಅಸದೃಶವೂ, ಅದ್ಭುತವೂ, ಸರ್ವಾತ್ಮಕವೂ, ವಿಶ್ವಾತ್ಮಕವೂ ಆದ ಈ ಪರಿಕಲ್ಪನೆಯೇ ಇಡೀ ಮಾನವತೆಗೆ ವೇದಾಂತವು ನೀಡುವ ಮಹಾನ್ ಕೊಡುಗೆಯಾಗಿದೆ; ಮಾನವನು ದಿವ್ಯತೆಗೆ ಏರಲು ಸಾಧನವಾಗುವಂತಹ ಸುಂದರ ಸೋಪಾನವಾಗಿದೆ.